# ನಮ್ಮ ಮನೆಯ ಪುಟ್ಟ

ಕರವೀರಪ್ರಭು ಕ್ಯಾಲಕೊಂಡ

ಪುಟ್ಟ ಪುಟ್ಟ ಹೆಜ್ಜೆ ಇಡುತ
ಬಂದ ನಮ್ಮ ಪುಟ್ಟ
ಬಾಲಚಂದ್ರನಂತೆ ಮನೆಗೆ
ಬೆಳಕ ತಂದು ಕೊಟ್ಟ

ದುಂಡು ಮೊಗವು ಬೊಚ್ಚು ಬಾಯಿ
ಚೆಲುವ ಚಂದ್ರ ನೋಟ
ದೃಷ್ಟಿ ತಾಗುವಂತೆ ಇಹುದು
ಅವನ ಮೈಯ ಮಾಟ

ಎತ್ತಿಕೊಳದೆ ಮುದ್ದು ಮಾಡೆ
ಮುನಿಸಿಕೊಂಡು ಬಿಡುವ
ಪ್ರೀತಿ ತೋರಿ ಎತ್ತಿಕೊಳಲು
ನಗುತ ಓಡಿ ಬರುವ

ಹಸಿವು ಎಂದು ಹಟವ ಮಾಡ
ಬೇಡ ಮುದ್ದು ಕಂದ
ಅವನ ನಡಿಗೆ ಅವನ ಭಾಷೆ
ಕೇಳಲೆಂಥ ಚೆಂದ

ಅಜ್ಜ ಅಜ್ಜಿ ಅಂದ್ರೆ ಅವಗೆ
ತುಂಬ ಅಚ್ಚುಮೆಚ್ಚು
ಕೊಡುವರವಗೆ ಮುದ್ದಿನಿಂದ
ಹಿಡಿದು ಬೆಲ್ಲದಚ್ಚು

ಪುಟ್ಟನಿಂದ ನಮ್ಮ ಮನೆಯು
ನಿತ್ಯ ಬೆಳಗುತಿಹುದು
ನಮ್ಮ ದಣಿವನೆಲ್ಲ
ಗಳಿಗೆಯಲ್ಲಿ ಮರೆಸುತಿಹುದು



ವಿಜಯಕುಮಾರಿ

## ಕುಂಚ ಪ್ರಪಂಚ



**ಗಗನ್ ಆರ್.**
7ನೇ ತರಗತಿ,
ಬಿಸಿಇಎಚ್‌ಎಸ್
ಆರ್‌ಆರ್ ನಗರ ಬೆಂಗಳೂರು



# ಕಾರಣ ಯಾರು?

ವಸುಂಧರಾ ಕದಲೂರು

ಹೂವಿಗೆ ಪರಿಮಳ ಇತ್ತವರಾರು
ದುಂಬಿಯ ಅತ್ತಲೆ ಕರೆದವರಾರು
ಹೂವೊಳು ಬಗೆಬಗೆ ರಂಗನು ಇಟ್ಟು
ಹಣ್ಣಿಗೆ ಸಿಹಿಸಿಹಿ ರುಚಿಯನು ಕೊಟ್ಟು
ಸವಿಯುವ ಆಸೆ ಮನದಲಿ ಬಿಟ್ಟವರಾರು

ನೀಲಿಯ ಬಣ್ಣವ ಗಗನಕೆ ಬಳಿದು
ಕಾಮನ ಬಿಲ್ಲನು ಬಾಗಿಸಿ ಎಳೆದು
ಮುಗಿಲಿಗೆ ರಂಗಿನ ತೋರಣ ಕಟ್ಟಿ
ಮಳೆಹನಿ ಮಿಂಚಿನ ಮೋಹಕ ಪಟ್ಟಿ
ಬಾನಿನ ಮೇಲಿಂದ ಇಳೆಗಿಳಿಸಿದವರಾರು

ಪುಟ್ಟನ ಪ್ರಶ್ನೆಗೆ ಪುಟ್ಟಿಯ ಮಾತಿನ ಸಾತು
ಉತ್ತರ ಹೊಳೆಯದೆ ಅಮ್ಮನು ಸೋತು
ದೇವರ ಪಟಕೆ ಹೂವೇರಿಸುತಾ ನಮಿಸುತ
ಸೃಷ್ಟಿಗೆ ದೈವವೇ ಕಾರಣ ಎಂದುತ್ತರಿಸುತ
ಮಕ್ಕಳ ಹರಸೆಂದು ತಲೆ ಬಾಗಿಸಿದಳು
ನಮಿಸಿದ ಚಿಣ್ಣರ ತಾನೂ ಹರಿಸಿದಳು.



ಸಂತೋಷ್ ಸಸಿಹಿತ್ಲು